2017 ಕ.ತೀ.ವ 62

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

ರಿಯಾಜ್ ಅಹಮದ್ ಇಸ್ಮಾಯಿಲ್ ಸಾಬ್ ಸಿರ್ಸಿ ಮತ್ತು ಇನ್ನೊಬ್ಬರು –ವಿರುದ್ಧ–
ರೊಮಾಓ ಮತ್ತು ಇತರರು*

ಭಾರತ ಸಂವಿಧಾನ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 33ನೇ ಪ್ರಕರಣದ ಉಪ ಖಂಡ(1) ಮತ್ತು (2)

ವಾದಿಗಳ ಹೆಸರಿನಲ್ಲಿ ಇಲ್ಲಿನ ಪ್ರತಿವಾದಿ ಸಂಖ್ಯೆ 1/ಪ್ರತ್ಯರ್ಜಿದಾರ ಸಂಖ್ಯೆ 4 ಇವರ ಮೂಲಕ ಅನುಷ್ಠಾನಗೊಳಿಸಿದ 24.8.2009ನೇ ದಿನಾಂಕದಂದಿನ ಸಾಲದ ಒಪ್ಪಂದವನ್ನು ಆಧರಿಸಿದ ಗುತ್ತಿಗೆಯ ನಿರ್ದಿಷ್ಟ ಕಾರ್ಯ ನಿರ್ವಹಣೆಯನ್ನು ಕೋರಿ ಇಲ್ಲಿನ 1 ರಿಂದ 3 ರವರೆಗಿನ ಪ್ರತ್ಯರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ.

ಅಧೀನ ನ್ಯಾಯಾಲಯಗಳು ಆಕ್ಷೇಪಣೆಗಳನ್ನು ರದ್ದುಗೊಳಿಸಿ, ಸಾಕ್ಷ್ಯದಲ್ಲಿ ದಸ್ತಾವೇಜುಗಳನ್ನು ಗುರುತಿಸಲು ಅನುಮತಿ ನೀಡಿರುತ್ತವೆ. ಸದರಿ ಆದೇಶದಿಂದ ಬಾಧಿತರಾದವರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮುದ್ರಾಂಕ ಶುಲ್ಕವನ್ನು ವಿಧಿಸಬಹುದಾಗಿದ್ದಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಮೊದಲೇ, ನ್ಯಾಯಾಲಯವು, ಅಂಥ ದಸ್ತಾವೇಜನ್ನು ಯುಕ್ತವಾಗಿ ಮುದ್ರಾಂಕ ಗೊಳಿಸಲಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳಬೇಕೆಂಬುದನ್ನು ಕಂಡು ಕೊಂಡಿರುತ್ತೇನೆ. ಇದರಿಂದಾಗಿ, ಇದನ್ನು

*ರಿಟ್ ಅರ್ಜಿ ಸಂ. 109209/2015, ದಿನಾಂಕ: 27ನೇ ಜನವರಿ, 2016.

ಯುಕ್ತವಾಗಿ ಸ್ಟಾಂಪು ಮಾಡಲಾಗದಿದ್ದಲ್ಲಿ, ದಸ್ತಾವೇಜನ್ನು ವಶಪಡಿಸಿ ಕೊಳ್ಳಬಹುದಾಗಿರುತ್ತದೆ.

ಲಿಖಿತವನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗಿದೆಯೇ ಮತ್ತು ಅಂಥ ಲಿಖಿತವು ಜಾರಿಯಾಗಿದ್ದಾಗ ಅಥವಾ ಮೊದಲೇ ಜಾರಿಗೊಳಿಸಿದ್ದಾಗ, ಆ ದಿನಾಂಕದಂದು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಅಗತ್ಯಪಡಿಸಿದ ಮೌಲ್ಯ ಮತ್ತು ಅರ್ಥ ವಿವರಣೆಯ ಸ್ಟಾಂಪಿನೊಂದಿಗೆ ಲಿಖಿತವನ್ನು ಹಾಜರುಪಡಿಸುವ ಮೊದಲು ಸ್ಟಾಂಪು ಮಾಡಲಾಗಿದೆಯೆ ಎಂಬುದನ್ನು ಮೊದಲೇ ಪರೀಕ್ಷಿಸಿರಬೇಕೆಂಬುದನ್ನು ನ್ಯಾಯಾಲಯವು ಗಮನಿಸಲೇ ಬೇಕಾಗಿರುತ್ತದೆಂಬುದು ಮೇಲಿನ ಪ್ಯಾರಾಗಳ ಜಾಗರೂಕ ಓದಿನಿಂದ ತಿಳಿದುಬರುತ್ತದೆ. ''ಅಂಥ ಲಿಖಿತವು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ'' ಎಂಬ ಪರಿಭಾಷಾ ಅಭಿವ್ಯಕ್ತಿಯನ್ನು, ಇದಾದ ಕೂಡಲೇ ಬರುವಂಥ ''ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂಥ ಕಾನೂನಿನ ಮೂಲಕ ಅಗತ್ಯಪಡಿಸಿದ ಮೌಲ್ಯ ಮತ್ತು ಅರ್ಥವಿವರಣೆಯ ಸ್ಟಾಂಪು'' ಎಂಬ ಪದಾವಳಿಗಳನ್ನು ಊರ್ಜಿತಗೊಳಿಸುತ್ತದೆ. ಆದ್ದರಿಂದ, ಅಂಥ ಲಿಖಿತವನ್ನು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ ಎಂಬ ಪದಾವಳಿಯು ಸೂಚಿಸುವ ಸಮಯವು, ಸ್ಟಾಂಪು ಶುಲ್ಕದ ಮೊಬಲಗು ಮತ್ತು ದಸ್ತಾವೇಜನ್ನು ಬರೆದುಕೊಟ್ಟ ಸಮಯದಲ್ಲಿ ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಅಥವಾ ದಸ್ತಾವೇಜನ್ನು ಮೊದಲು ಬರೆದುಕೊಟ್ಟ ಸಮಯದಲ್ಲಿ ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಸ್ಟಾಂಪಿನ ಅರ್ಥ ವಿವರಣೆಯನ್ನು ಉಲ್ಲೇಖಿಸುತ್ತದೆಯೆಂಬುದು ತಿಳಿದಿರುವಂತಹುದೇ ಆಗಿರುತ್ತದೆ. ಆದ್ದರಿಂದ, ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕದಿಂದ ಲಿಖಿತದ ಮೇಲೆ ಸಂದಾಯ ಮಾಡಿರುವಂಥ ಸರಿಯಾದ ಸ್ಟಾಂಪು ಶುಲ್ಕವನ್ನು ದಸ್ತಾವೇಜು ಭರಿಸಿದೆಯೆ ಎಂಬುದನ್ನು ನ್ಯಾಯಾಲಯವು ಪರೀಕ್ಷಿಸಬೇಕೆಂದು ಅಗತ್ಯಪಡಿಸಿರುತ್ತದೆ.

ಅಧಿನಿಯಮದ ೩೩ನೇ ಪ್ರಕರಣವು, ಸ್ಟಾಂಪು ಶುಲ್ಕದ ಮೌಲ್ಯದ ಉಲ್ಲೇಖದೊಂದಿಗಿನ ಮತ್ತು ದಸ್ತಾವೇಜನ್ನು ಬರೆದುಕೊಡುವ ಸಮಯದಲ್ಲಿ ಸಂದಾಯ ಮಾಡಬಹುದಾದ ವಿವರಣೆಯೊಂದಿಗಿನ ಲಿಖಿತದ ಸಂಬಂಧದಲ್ಲಿ ಸರಿಯಾದ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಲಾಗಿದೆಯೇ ಎಂಬುದನ್ನು ಪರೀಕ್ಷಿಸಲು ನ್ಯಾಯಾಲಯವನ್ನು ಅಗತ್ಯಪಡಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಧೀನ ನ್ಯಾಯಾಲಯವು ಸಂದಾಯ

ಮಾಡಿರುವ ಸ್ಟಾಂಪು ಶುಲ್ಕ ಸರಿಯಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ. ಅರ್ಜಿದಾರರು, ಕೊರತೆಯಿರುವ ಸ್ಟಾಂಪು ಶುಲ್ಕವನ್ನು ಹೇಗೆ ಸಂದಾಯ ಮಾಡಲಾಗಿದೆ ಮತ್ತು ಎಲ್ಲಾ ಅಂಥ ಸಂದಾಯವನ್ನು, ಬಾಕಿ ಸಂದಾಯದಂತೆಯೇ ಮಾನ್ಯಗೊಳಿಸಬೇಕಾಗಿರುತ್ತದೆಯೇ ಎಂಬುದನ್ನು ಕಂಡುಕೊಳ್ಳಲು ಕ್ರಮ ತೆಗೆದುಕೊಳ್ಳಬೇಕೆಂಬುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವನ್ನು ಕೋರಿರುವುದಿಲ್ಲ. ಈ ಹಂತದಲ್ಲಿ ನ್ಯಾಯಾಲಯವು, ಕೊರತೆಯಿರುವ ಸ್ಟಾಂಪು ಶುಲ್ಕದ ಸಂದಾಯಕ್ಕೆ ಸಂಬಂಧಿಸಿದಂತೆ ಅಳವಡಿಸಿಕೊಳ್ಳಬೇಕಾದ ರೀತಿ ಅಥವಾ ವಿಧಾನವನ್ನು ಪ್ರಯತ್ನಿಸಲಾಗುವುದಿಲ್ಲ. ಅಧೀನ ನ್ಯಾಯಾಲಯವು, ದಸ್ತಾವೇಜಿನ ಮೇಲೆ ಸಂದಾಯ ಮಾಡಬಹುದಾಗಿದ್ದ ಸ್ಟಾಂಪು ಶುಲ್ಕಕ್ಕೆ ಸಂಬಂಧಿಸಿದ ವಿಷಯವನ್ನು ಸ್ವತಃ ಮನವರಿಕೆ ಮಾಡಿಕೊಂಡು, ವಾಸ್ತವವಾಗಿ, ಯುಕ್ತವಾಗಿ ಸಂದಾಯ ಮಾಡಲಾಗಿರುವ ಸ್ಟಾಂಪು ಶುಲ್ಕದ ದಸ್ತಾವೇಜನ್ನು ಹಾಜರುಪಡಿಸಲು ವಾದಿಗಳಿಗೆ ಅವಕಾಶ ನೀಡಿದ್ದು, ಇದನ್ನು ಸಾಕ್ಷ್ಯದಂತೆ ಗುರುತು ಮಾಡಲಾಗಿದೆಯೆಂಬ ತೀರ್ಮಾನಕ್ಕೆ ಬಂದಿರುತ್ತದೆ. ಕರ್ನಾಟಕ ಸ್ಟಾಂಪ್ ಅಧಿನಿಯಮ 1957– 2(ಎಫ್) ಪ್ರಕರಣ – ''ಅನುಷ್ಠಾನಗೊಳಿಸಿದ'' ಮತ್ತು ''ಅನುಷ್ಠಾನ'' ಪದಾವಳಿಗಳನ್ನು – ಚರ್ಚಿಸಲಾಗಿದೆ.

ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

*1. ಎಐಆರ್ 1963 ಸುಪ್ರೀಂ ಕೋರ್ಟ್ 1307*
*ನ್ಯೂ ಸೆಂಟ್ರಲ್ ಜೂಟ್ ಮಿಲ್ಸ್ ಕೊ. ಲಿ. ಮತ್ತು ಇತರರು*
*–ವಿರುದ್ಧ– ಪಶ್ಚಿಮ ಬಂಗಾಳ ಸರ್ಕಾರ ಮತ್ತು ಇತರರು (ಉಲ್ಲೇ) 3*

ಅರ್ಜಿದಾರರ ಪರ: ಶ್ರೀ ಅನಂತ್ ಹೆಗಡೆ ಮತ್ತು ಶ್ರೀ ವಿಶ್ವನಾಥ ಹೆಗಡೆ, ವಕೀಲರು.
1 ರಿಂದ 3ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಪಿ. ಹೆಗಡೆ ಮತ್ತು ಶ್ರೀ ವಿಜಯ್ ಮಳಲಿ, ವಕೀಲರು.
4ನೇ ಪ್ರತ್ಯರ್ಜಿದಾರರಿಗೆ ನೋಟೀಸ್ ಜಾರಿ ಮಾಡಿದೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್** :

ಅರ್ಜಿದಾರರು ಸಿರಸಿಯ ಹಿರಿಯ ಸಿವಿಲ್ ನ್ಯಾಯಾಧೀಶರ ಕಡತದ ಮೇಲೆ ಇತ್ಯರ್ಥದಲ್ಲಿರುವ ಒಎಸ್ ಸಂಖ್ಯೆ 3/2011ರಲ್ಲಿನ ಪ್ರತ್ಯರ್ಜಿದಾರರಾಗಿರುತ್ತಾರೆ. ಸದರಿ ದಾವೆಯನ್ನು ವಾದಿಗಳ ಹೆಸರಿನಲ್ಲಿ ಇಲ್ಲಿನ ಪ್ರತಿವಾದಿ ಸಂಖ್ಯೆ 1/ ಪ್ರತ್ಯರ್ಜಿದಾರ ಸಂಖ್ಯೆ 4 ಇವರ ಮೂಲಕ ಅನುಷ್ಠಾನಗೊಳಿಸಿದ 24.8.2009ನೇ ದಿನಾಂಕದಂದಿನ ಸಾಲದ ಒಪ್ಪಂದವನ್ನು ಆಧರಿಸಿದ ಗುತ್ತಿಗೆಯ ನಿರ್ದಿಷ್ಟ ಕಾರ್ಯ ನಿರ್ವಹಣೆಯನ್ನು ಕೋರಿ ಇಲ್ಲಿನ 1 ರಿಂದ 3 ರವರೆಗಿನ ಪ್ರತ್ಯರ್ಜಿದಾರರು ಸಲ್ಲಿಸಿರುತ್ತಾರೆ. ಪಿಡಬ್ಲ್ಯೂ.2ರ ಸಾಕ್ಷ್ಯದ ಅವಧಿಯಲ್ಲಿ, ವಾದಿಗಳು ಸದರಿ ದಸ್ತಾವೇಜುಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಸ್ತಾವೇಜುಗಳ ಸಲ್ಲಿಕೆ ಮತ್ತು ಗುರುತು ಮಾಡುವಿಕೆಯನ್ನು 2 ಮತ್ತು 3ನೇ ಅರ್ಜಿದಾರರು/ಪ್ರತಿವಾದಿಗಳು ಆಕ್ಷೇಪಿಸಿರುತ್ತಾರೆ. ಅಧೀನ ನ್ಯಾಯಾಲಯಗಳು ಆಕ್ಷೇಪಣೆಗಳನ್ನು ರದ್ದುಗೊಳಿಸಿ, ಸಾಕ್ಷ್ಯದಲ್ಲಿ ದಸ್ತಾವೇಜುಗಳನ್ನು ಗುರುತಿಸಲು ಅನುಮತಿ ನೀಡಿರುತ್ತವೆ. ಸದರಿ ಆದೇಶದಿಂದ ಬಾಧಿತರಾದವರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅಧೀನ ನ್ಯಾಯಾಲಯವು, 03.02.2011ರಂದು ವಾದಿಗಳು, ಮಾರಾಟದ ಈ ಒಪ್ಪಂದದ ಸಂಬಂಧದಲ್ಲಿ 44,900/-ರೂ.ಗಳ ಕೊರತೆ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಿರುತ್ತಾರೆಂಬುದನ್ನು ಮಾರಾಟ ಒಪ್ಪಂದವು ಬಹಿರಂಗ ಪಡಿಸುತ್ತದೆಂಬುದಾಗಿ ಅಭಿಪ್ರಾಯಪಟ್ಟಿರುತ್ತದೆ. ಹಾಗಾಗಿ, ದಸ್ತಾವೇಜುಗಳನ್ನು ಅಸಮರ್ಥನೀಯವಾಗಿ ಸ್ಟಾಂಪು ಮಾಡಲಾಗಿದೆಯೆಂಬುದು ಸಮರ್ಥನೀಯ ವಾಗಿರುವುದಿಲ್ಲವೆಂದು 2 ಮತ್ತು 3ನೇ ಪ್ರತಿವಾದಿಗಳ ಹೇಳಿಕೆಯ ಮೂಲಕ ಆಕ್ಷೇಪಣೆಯನ್ನು ಎತ್ತಲಾಗಿರುತ್ತದೆ.

3. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಅನಂತ ಹೆಗಡೆಯವರು ಕರ್ನಾಟಕ ಸ್ಟಾಂಪು ಅಧಿನಿಯಮ ಮತ್ತು ನಿಯಮಗಳ ಯುಕ್ತ

ಉಪಬಂಧಗಳ ಕಡೆಗೆ ನನ್ನ ಗಮನವನ್ನು ಸೆಳೆದು, ಅಂತಿಮವಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ 1957ರ (ಸಂಕ್ಷಿಪ್ತವಾಗಿ ಇನ್ನು ಮುಂದೆ ಅಧಿನಿಯಮ ಎಂದು ಕರೆಯಲಾಗಿದೆ) 33ನೇ ಪ್ರಕರಣದ ಉದ್ದೇಶಕ್ಕಾಗಿ, ಅದರಲ್ಲೂ ನಿರ್ದಿಷ್ಟವಾಗಿ (2)ನೇ ಖಂಡವು, ಲಿಖಿತವನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ನ್ಯಾಯಾಲಯವು ಅಗತ್ಯಪಡಿಸಿದಂಥ ಸ್ಟಾಂಪು ಶುಲ್ಕವನ್ನು, ಅಂಥ ಲಿಖಿತವನ್ನು ಅನುಷ್ಠಾನಗೊಳಿಸುವಾಗ ಅಥವಾ ಮೊದಲು ಅನುಷ್ಠಾನಗೊಳಿಸುವಾಗ ಸಂದಾಯ ಮಾಡಲಾಗಿದೆಯೆ ಎಂಬುದನ್ನು ಗಮನಿಸಿಕೊಳ್ಳಬೇಕಾಗುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ. ವಾದಿಗಳು 44,900/- ರೂ.ಗಳ ಮೊಬಲಗಿನ ಕೊರತೆ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಿರುತ್ತಾರೆಂದು ಪರಿಭಾವಿಸಿದ್ದಾಗ್ಯೂ, ಅಧಿನಿಯಮದ 40ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗನುಸಾರವಾಗಿ ಅದನ್ನು ಸಂದಾಯ ಮಾಡಲಾಗಿಲ್ಲ ಮತ್ತು ಅನುಮೋದಿಸಲಾಗುವುದಿಲ್ಲ. ಅಂಥ ಸಂದಾಯವು ಸ್ಟಾಂಪು ಶುಲ್ಕವನ್ನು ಸಂದಾಯದ ಬಾಕಿಗೆ ಸಂಬಂಧಪಡುವುದಿಲ್ಲ. ಇವರ ವಾದಕ್ಕೆ ಪೂರಕವಾಗಿ, ಅಧಿನಿಯಮದ 2(ಇ) ಪ್ರಕರಣದಲ್ಲಿ ಒಳಗೊಂಡ 'ಯುಕ್ತವಾಗಿ ಸ್ಟಾಂಪು ಮಾಡಿದ' ಪದಾವಳಿಯ ಪರಿಭಾಷೆಯನ್ನು ಹಾಗೂ ಅಧಿನಿಯಮದ 2(ಎಫ್) ಪ್ರಕರಣದಡಿಯಲ್ಲಿ ಪರಿಭಾಷಿಸಿದ 'ಅನುಷ್ಠಾನಗೊಳಿಸಿದ' ಮತ್ತು 'ಅನುಷ್ಠಾನ' ಪದಾವಳಿಯ ಪರಿಭಾಷೆಯನ್ನು ಇವರು ಉದಾಹರಿಸಿರುತ್ತಾರೆ. ಅಲ್ಲದೆ, ***ನ್ಯೂ ಸೆಂಟ್ರಲ್ ಜೂಟ್ ಮಿಲ್ಸ್ ಕೊ. ಲಿ. ಮತ್ತು ಇತರರು -ವಿರುದ್ಧ - ಪಶ್ಚಿಮ ಬಂಗಾಳ ಸರ್ಕಾರ ಮತ್ತು ಇತರರು***[1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಉದಾಹರಿಸಿರುತ್ತಾರೆ.

4. ಮಾನ್ಯ ನ್ಯಾಯವಾದಿಗಳು, ಜಿಲ್ಲಾಧಿಕಾರಿಗಳು ನೀಡಿರುವ ಯಾವುದೇ ಪ್ರಮಾಣಪತ್ರವು ಇಲ್ಲದಿರುವಲ್ಲಿ ಸರಿಯಾದ ಶುಲ್ಕವನ್ನು ಸಂದಾಯ ಮಾಡಲಾಗಿದ್ದು, ಕೊರತೆಯಿರುವ ಸ್ಟಾಂಪು ಶುಲ್ಕದ ಸಂದಾಯದಿಂದ ಮಾತ್ರವೇ 41ನೇ ಪ್ರಕರಣದ ಮೇರೆಗೆ ದೋಷವನ್ನು ಸರಿಪಡಿಸಲಾಗುವುದಿಲ್ಲವೆಂದು ಅಭಿಪ್ರಾಯವಿರುವುದನ್ನೂ

1. ಎಐಆರ್ 1963 ಸುಪ್ರೀಂ ಕೋರ್ಟ್ 1037

ಸಹ ಪ್ರಸ್ತಾಪಿಸಿರುತ್ತಾರೆ. ಜಿಲ್ಲಾಧಿಕಾರಿಯವರ ಮುಂದೆ ವಾದಿಗಳು ಯಾವುದೇ ಅರ್ಜಿಯು ಸಲ್ಲಿಸದಿರುವುದಲ್ಲಿ ಮತ್ತು ಜಿಲ್ಲಾಧಿಕಾರಿಗಳು ಸಾಕಷ್ಟು ಮುದ್ರಾಂಕ ಶುಲ್ಕದ ಸಂದಾಯಕ್ಕೆ ಸಂಬಂಧಿಸಿದಂತೆ ಸ್ವತಃ ಮನವರಿಕೆ ಮಾಡಿಕೊಳ್ಳುವ ಮೂಲಕ ಯಾವುದೇ ಆದೇಶವನ್ನು ಹೊರಡಿಸದಿರುವುದರಿಂದ ಕೊರತೆ ಸ್ಟಾಂಪು ಶುಲ್ಕವು ಬಾಕಿಯಿದೆಯೆಂದು ಹೇಳಲಾಗುವುದಿಲ್ಲವೆಂದು ವಾದಿಸಿ ಕರ್ನಾಟಕ ಸ್ಟಾಂಪು ನಿಯಮಗಳು, 1958ರ 18-ಎ ನಿಯಮವನ್ನು ಸಹ ಇವರು ಉಲ್ಲೇಖಿಸಿರುತ್ತಾರೆ.

5. ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಎ.ಪಿ. ಹೆಗಡೆಯವರು ಅಧೀನ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ಸಮರ್ಥವಾಗಿ ಬೆಂಬಲಿಸಿರುತ್ತಾರೆ. ಇವರು 28.11.2014ರ ರಿಟ್ ಅರ್ಜಿ ಸಂಖ್ಯೆ 104963/2014ರಲ್ಲಿ ಈ ನ್ಯಾಯಾಲಯದ ತೀರ್ಪಿನ ಮೇಲೆ ನಂಬಿಕೆಯನ್ನು ಇಟ್ಟಿರುತ್ತಾರೆ. ಇವರು ಸಿವಿಲ್ ನ್ಯಾಯಾಲಯದ ಎದುರಿನ ವಿಚಾರಣೆಯ ವ್ಯಾಪ್ತಿಯನ್ನು ದಸ್ತಾವೇಜಿನ ಮೇಲೆ ಸಾಕಷ್ಟು ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಲಾಗಿದೆಯೇ ಎಂಬುದನ್ನು ಕಂಡುಕೊಳ್ಳಲು ನಿರ್ಬಂಧಿಸಬೇಕೆಂದು ನಿವೇದಿಸಿಕೊಂಡಿರುತ್ತಾರೆ.

6. ಸಂಬಂಧಪಟ್ಟ ವಾದಗಳ ಹಿನ್ನೆಲೆಯಲ್ಲಿ, ದಾಖಲೆಯ ಮೇಲಿನ ಇಡೀ ವಸ್ತುವಿಷಯವನ್ನು ಎಚ್ಚರಿಕೆಯಿಂದ ಪರಿಗಣಿಸಿದ ತರುವಾಯ, ನಾನು, ಮುದ್ರಾಂಕ ಶುಲ್ಕವನ್ನು ವಿಧಿಸಬಹುದಾಗಿದ್ದಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಮೊದಲೇ, ನ್ಯಾಯಾಲಯವು, ಅಂಥ ದಸ್ತಾವೇಜನ್ನು ಯುಕ್ತವಾಗಿ ಮುದ್ರಾಂಕ ಗೊಳಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳಬೇಕೆಂಬುದನ್ನು ಕಂಡು ಕೊಂಡಿರುತ್ತೇನೆ. ಇದರಿಂದಾಗಿ, ಇದನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗದಿದ್ದಲ್ಲಿ, ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದಾಗಿರುತ್ತದೆ. ಇದನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗಿದೆಯೇ ಎಂಬುದನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ ನ್ಯಾಯಾಲಯವು, ಅಂಥ ದಸ್ತಾವೇಜನ್ನು ಅನುಷ್ಠಾನಗೊಳಿಸಿದಾಗ ಅಥವಾ ಮೊದಲು ಅನುಷ್ಠಾನಗೊಳಿಸಿದಾಗ, ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ಅಗತ್ಯಪಡಿಸಿದ ಮೌಲ್ಯ ಮತ್ತು ಅರ್ಥ ವಿವರಣೆಯು ಸ್ಟಾಂಪಿನೊಂದಿಗೆ ಇದನ್ನು ಸ್ಟಾಂಪು ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ

ಪ್ರತಿಯೊಂದು ದಸ್ತಾವೇಜನ್ನು ಪರೀಕ್ಷಿಸುವುದಕ್ಕೆ ಶುಲ್ಕದೊಂದಿಗೆ ತೊಡಗಿಸಿಕೊಂಡಿದೆ. ಈ ಸಮಯದಲ್ಲಿ, ಅವಶ್ಯಕವಿರುವ ಮಟ್ಟಿಗೆ 33ನೇ ಪ್ರಕರಣದ (1) ಮತ್ತು (2)ನೇ ಉದ್ಧೃತ ಉಪಖಂಡಗಳಿಗೆ ಇದು ಉಪಯುಕ್ತವಾಗಿರುತ್ತದೆ.

> ***"ಪ್ರಕರಣ 33(1).– ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಸ್ವಾಧೀನತೆಗೆ ತೆಗೆದುಕೊಳ್ಳುವುದು.–*** *(1) ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸುವ ಅಧಿಕಾರವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಮತ್ತು ಪೊಲೀಸ್ ಅಧಿಕಾರಿಯನ್ನು ಹೊರತುಪಡಿಸಿ ಸರ್ಕಾರಿ ಕಚೇರಿಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ಅವನ ಅಭಿಪ್ರಾಯದಲ್ಲಿ, ಶುಲ್ಕವನ್ನು ವಿಧಿಸತಕ್ಕ ಯಾವ ಲಿಖಿತವನ್ನು ಅವನ ಮುಂದೆ ಹಾಜರುಪಡಿಸಲಾಗುವುದೋ ಅಥವಾ ಅವನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅವನ ಬಳಿ ಬರುವುದೋ ಆ ಯಾವುದೇ ಲಿಖಿತಕ್ಕೆ ಯುಕ್ತ ಸ್ಟಾಂಪು ಹಚ್ಚಿಲ್ಲವೆಂದು ಅವನಿಗೆ ಕಂಡು ಬಂದರೆ, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು.*
>
> *(2) ಆ ಉದ್ದೇಶಕ್ಕಾಗಿ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಶುಲ್ಕ ವಿಧಿಸಬಹುದಾದ ಮತ್ತು ಹಾಗೆ ಹಾಜರುಪಡಿಸಬಹುದಾದ ಅಥವಾ ಅವನ ಮುಂದೆ ಬರಬಹುದಾದ ಪ್ರತಿಯೊಂದು ಲಿಖಿತವನ್ನು, ಅಂಥ ಲಿಖಿತವನ್ನು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ ಕರ್ನಾಟಕದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಅಗತ್ಯಪಡಿಸಲಾದ ಮೌಲ್ಯದ ಮತ್ತು ವಿವರಣೆಯ ಸ್ಟಾಂಪನ್ನು ಹಚ್ಚಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಿಸತಕ್ಕದ್ದು."*

7. ಲಿಖಿತವನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗಿದೆಯೇ ಮತ್ತು ಅಂಥ ಲಿಖಿತವು ಜಾರಿಯಾಗಿದ್ದಾಗ ಅಥವಾ ಮೊದಲೇ ಜಾರಿಗೊಳಿಸಿದ್ದಾಗ, ಆ ದಿನಾಂಕದಂದು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ

ಅಗತ್ಯಪಡಿಸಿದ ಮೌಲ್ಯ ಮತ್ತು ಅರ್ಥ ವಿವರಣೆಯ ಸ್ಟಾಂಪಿನೊಂದಿಗೆ ಲಿಖಿತವನ್ನು ಹಾಜರುಪಡಿಸುವ ಮೊದಲು ಸ್ಟಾಂಪು ಮಾಡಲಾಗಿದೆಯೆ ಎಂಬುದನ್ನು ಮೊದಲೇ ಪರೀಕ್ಷಿಸಿರಬೇಕೆಂಬುದನ್ನು ನ್ಯಾಯಾಲಯವು ಗಮನಿಸಲೇ ಬೇಕಾಗಿರುತ್ತದೆಂಬುದು ಮೇಲಿನ ಪ್ಯಾರಾಗಳ ಜಾಗರೂಕ ಓದಿನಿಂದ ತಿಳಿದುಬರುತ್ತದೆ. 'ಅಂಥ ಲಿಖಿತವು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ' ಎಂಬ ಪರಿಭಾಷಾ ಅಭಿವ್ಯಕ್ತಿಯನ್ನು, ಇದಾದ ಕೂಡಲೇ ಬರುವಂಥ "ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂಥ ಕಾನೂನಿನ ಮೂಲಕ ಅಗತ್ಯಪಡಿಸಿದ ಮೌಲ್ಯ ಮತ್ತು ಆರ್ಥವಿವರಣೆಯ ಸ್ಟಾಂಪು" ಎಂಬ ಪದಾವಳಿಗಳನ್ನು ಊರ್ಜಿತಗೊಳಿಸುತ್ತದೆ. ಆದ್ದರಿಂದ, ಅಂಥ ಲಿಖಿತವನ್ನು ಬರೆದುಕೊಟ್ಟಾಗ ಅಥವಾ ಮೊದಲು ಬರೆದುಕೊಟ್ಟಾಗ ಎಂಬ ಪದಾವಳಿಯು ಸೂಚಿಸುವ ಸಮಯವು, ಸ್ಟಾಂಪು ಶುಲ್ಕದ ಮೊಬಲಗು ಮತ್ತು ದಸ್ತಾವೇಜನ್ನು ಬರೆದುಕೊಟ್ಟ ಸಮಯದಲ್ಲಿ ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಅಥವಾ ದಸ್ತಾವೇಜನ್ನು ಮೊದಲು ಬರೆದುಕೊಟ್ಟ ಸಮಯದಲ್ಲಿ ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಸ್ಟಾಂಪಿನ ಅರ್ಥ ವಿವರಣೆಯನ್ನು ಉಲ್ಲೇಖಿಸುತ್ತದೆಯೆಂಬುದು ತಿಳಿದಿರುವಂತಹುದೇ ಆಗಿರುತ್ತದೆ.

8. ಪ್ರಕರಣ 2(ಎಫ್)ರಲ್ಲಿ ಪರಿಭಾಷಿಸಿದಂತೆ 'ಬರೆದು ಕೊಟ್ಟ' ಮತ್ತು 'ಬರೆದ' ಅಭಿವ್ಯಕ್ತಿಗಳನ್ನು ಈ ಮುಂದಿನಂತೆ ಓದಲಾಗಿದೆ:

> "2(ಎಫ್) 'ಸಹಿ ಮಾಡಿದ' ಮತ್ತು 'ಸಹಿ' ಗಳನ್ನು ಲಿಖಿತಗಳ ಉಲ್ಲೇಖದೊಂದಿಗೆ 'ಬರೆದುಕೊಟ್ಟ', ಮತ್ತು 'ಬರೆದ' ಎಂದು ಬಳಸಲಾಗಿದೆ."

ಈ ಪದಾವಳಿಗಳು, ದಸ್ತಾವೇಜಿಗೆ ಸಹಿ ಮಾಡಿದಾಗ, ಅದನ್ನು ಬರೆದುಕೊಡಲಾಗಿದೆಯೆಂಬುದನ್ನು ಹೇಳಲಾಗುತ್ತದೆಂದು ಬಹಿರಂಗ ಪಡಿಸುತ್ತವೆ. ಅಲ್ಲದೆ, ***"ಯುಕ್ತವಾಗಿ ಸ್ಟಾಂಪು ಮಾಡಲಾಗಿದೆ"*** ಎಂಬ ಪದಾವಳಿಗಳನ್ನು ಪರಿಭಾಷಿಸಿದಂಥ 2(ಇ) ಪ್ರಕರಣದಿಂದ, ಯುಕ್ತವಾಗಿ ಸ್ಟಾಂಪು ಮಾಡಲಾಗಿದೆ

ಎಂಬ ಪದಾವಳಿಯು ಸರಿಯಾದ ಮೊಬಲಗಿಗಿಂತ ಕಡಿಮೆ ಇರದ ಮುದ್ರೆ ಹಾಕಲಾದ ಲಿಖಿತಗಳೆಂದು ಅರ್ಥ ಬರುವ ಲಿಖಿತಗಳಿಗೆ ಅನ್ವಯವಾಗುತ್ತವೆಂಬುದು ಮತ್ತು ಕರ್ನಾಟಕ ರಾಜ್ಯದ ಪ್ರಾಂತ್ಯಗಳಲ್ಲಿ ಸಕಾಲಿಕವಾಗಿ ಜಾರಿಯಲ್ಲಿರುವಂಥ ಕಾನೂನಿನಗನುಸಾರವಾಗಿ ಅಂಥ ಸ್ಟಾಂಪುಗಳನ್ನು ಮುದ್ರಿಸಲಾಗಿದೆಯೆಂಬುದು ಸ್ಪಷ್ಟವಾಗಿರುತ್ತದೆ.

9. ಆದ್ದರಿಂದ, ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕದಿಂದ ಲಿಖಿತದ ಮೇಲೆ ಸಂದಾಯ ಮಾಡಿರುವಂಥ ಸರಿಯಾದ ಸ್ಟಾಂಪು ಶುಲ್ಕವನ್ನು ದಸ್ತಾವೇಜು ಭರಿಸಿದೆಯೆ ಎಂಬುದನ್ನು ನ್ಯಾಯಾಲಯವು ಪರೀಕ್ಷಿಸಬೇಕೆಂದು ಅಗತ್ಯಪಡಿಸಿರುತ್ತದೆ. 24.08.2009ರಂದು ಪ್ರಸ್ತುತ ದಸ್ತಾವೇಜನ್ನು ಬರೆಯಲಾಗಿದ್ದು, 45,100/– ರೂ.ಗಳ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಬೇಕಾಗಿತ್ತು. ಆದರೆ ದಸ್ತಾವೇಜನ್ನು ಬರೆದುಕೊಟ್ಟಾಗ ಕೇವಲ 200 ರೂ.ಗಳನ್ನು ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಲಾಗಿರುತ್ತದೆ. ಈ ಸಂಬಂಧದಲ್ಲಿ 44,900/– ರೂ.ಗಳಷ್ಟು ಬಾಕಿ ಉಳಿದಿರುತ್ತದೆ. ಈ ಕೊರತೆ ಸ್ಟಾಂಪು ಶುಲ್ಕವನ್ನು 03.02.2011ರಂದು ವಾದಿಗಳು ಸಂದಾಯ ಮಾಡಿರುತ್ತಾರೆ. ಖಜಾನೆಯವರು, ನೀಡಿರುವ ರಸೀದಿಯನ್ನು ಅಧೀನ ನ್ಯಾಯಾಲಯದಲ್ಲಿ ಮುಂದೆ ಹಾಜರುಪಡಿಸಿದ್ದು, ಇದನ್ನು ನಿಶಾನೆ ಪಿ.7 ರುಜುವಾತುಪಡಿಸಿರುತ್ತದೆ. ರಸೀದಿಯಲ್ಲಿ, ದಿನಾಂಕ 24.08.2009ರಂದು ಮಾರಾಟದ ಒಪ್ಪಂದಪತ್ರದ ಸಂಬಂಧದಲ್ಲಿ ಕೊರತೆಯಿರುವ 44,900/– ರೂ.ಗಳ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಲಾಗಿದೆಯೆಂದು ಹೇಳಲಾಗಿರುತ್ತದೆ. ಆದ್ದರಿಂದ, ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕದಂದು ಸ್ಟಾಂಪು ಶುಲ್ಕವನ್ನು ಸಂದಾಯ ಮಾಡುವುದರೊಂದಿಗೆ ದಸ್ತಾವೇಜನ್ನು ಯುಕ್ತವಾಗಿ ಸ್ಟಾಂಪು ಮಾಡಲಾಗಿದೆಯೇ ಎಂಬುದನ್ನು ಕಂಡುಕೊಳ್ಳಲು ಸ್ಟಾಂಪು ಅಧಿನಿಯಮದ 33ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಕೈಗೊಂಡ ಪರಿಶೀಲನೆಯ ಉದ್ದೇಶಕ್ಕೇ ಸಂಬಂಧಿಸಿದಂತೆ, ವಾಸ್ತವವಾಗಿ ಅಗತ್ಯಪಡಿಸಿದ ಸ್ಟಾಂಪು ಶುಲ್ಕವನ್ನು ದಸ್ತಾವೇಜನ್ನು ಬರೆದುಕೊಟ್ಟಂಥ ದಿನಾಂಕದಂದು ಸಂದಾಯ ಮಾಡದೆ, ತರುವಾಯ, ಕೊರತೆಯಿರುವ ಕಾರಣಕ್ಕಾಗಿ ಸಂದಾಯ ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

10. ವಾಸ್ತವವಾಗಿ, ಅಧಿನಿಯಮದ 40ನೇ ಪ್ರಕರಣದಡಿಯಲ್ಲಿ ಒಂದು ಉಪಬಂಧವಿದ್ದು, ಇದು, ಸರಿಯಾಗಿ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡದ ವ್ಯಕ್ತಿ, ಖುದ್ದಾಗಿ ಜಿಲ್ಲಾಧಿಕಾರಿಯವರ ಮುಂದೆ ಹಾಜರಾಗಿ, ಕೊರತೆಯಿರುವ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಬೇಕೆಂದು ಉಪಬಂಧಿಸಿರುತ್ತದೆ. ಜಿಲ್ಲಾಧಿಕಾರಿಯು ಅಂಥ ಮೊಬಲಗನ್ನು ಸ್ವೀಕರಿಸಿ, ದಸ್ತಾವೇಜಿನ ಸಂಬಂಧದಲ್ಲಿ ಸರಿಯಾದ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಲಾಗಿದೆಯೆಂದು ಪ್ರಮಾಣೀಕರಿಸಿ ಪ್ರಮಾಣಪತ್ರವನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾರೆ.

11. ಪ್ರಸ್ತುತ ಪ್ರಕರಣದಲ್ಲಿ 1 ರಿಂದ 3ರ ವರೆಗಿನ ವಾದಿಗಳು / ಪ್ರತ್ಯರ್ಜಿದಾರರು ಕೊರತೆ ಶುಲ್ಕವನ್ನು ಜಿಲ್ಲಾಧಿಕಾರಿಗಳ ಎದುರು ಸಂದಾಯ ಮಾಡಲು ತೆರಳಿರುವುದಿಲ್ಲ. ಕೊರತೆಯಿರುವ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಲಾಗಿದೆಯೆಂದು ದಾಖಲಿಸಿ ಜಿಲ್ಲಾಧಿಕಾರಿಯವರಿಂದ ಯಾವುದೇ ಆದೇಶವನ್ನಾಗಲೀ ಅಥವಾ ಪ್ರಮಾಣಪತ್ರವನ್ನಾಗಲೀ ನೀಡಲಾಗಿರುವುದಿಲ್ಲ. ಈ ಕಾರಣಕ್ಕಾಗಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಸ್ತುತ ಪ್ರಕರಣದಲ್ಲಿ ಕೊರತೆಯಿರುವ ಸ್ಟ್ಯಾಂಪು ಶುಲ್ಕದ ಸಂದಾಯವನ್ನು, ಅಧಿನಿಯಮದ 33ನೇ ಪ್ರಕರಣದಡಿಯಲ್ಲಿ ನ್ಯಾಯಾಲಯವು ಅಧಿಕಾರವನ್ನು ಚಲಾಯಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಗಣನೆಗೆ ತೆಗೆದುಕೊಂಡಿರುವುದಿಲ್ಲ ಮತ್ತು ದಸ್ತಾವೇಜನ್ನು ಯುಕ್ತವಾಗಿ ಸ್ಟ್ಯಾಂಪು ಹಚ್ಚಿಲ್ಲವೆಂದು ಪರಿಗಣಿಸಬೇಕಾಗಿರುತ್ತದೆಂದು ವಾದಿಸಿರುತ್ತಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಧೀನ ನ್ಯಾಯಾಲಯವು ದಸ್ತಾವೇಜನ್ನು ಪರಿಬದ್ಧಗೊಳಿಸಲೇ ಬೇಕಾಗಿರುತ್ತದೆ. ಈ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಅಧಿನಿಯಮದ 33ನೇ ಪ್ರಕರಣವು, ಸ್ಟ್ಯಾಂಪು ಶುಲ್ಕದ ಮೌಲ್ಯದ ಉಲ್ಲೇಖದೊಂದಿಗಿನ ಮತ್ತು ದಸ್ತಾವೇಜನ್ನು ಬರೆದುಕೊಡುವ ಸಮಯದಲ್ಲಿ ಸಂದಾಯ ಮಾಡಬಹುದಾದ ವಿವರಣೆಯೊಂದಿಗಿನ ಲಿಖಿತದ ಸಂಬಂಧದಲ್ಲಿ ಸರಿಯಾದ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಲಾಗಿದೆ ಎಂಬುದನ್ನು ಪರೀಕ್ಷಿಸಲು ನ್ಯಾಯಾಲಯವನ್ನು ಅಗತ್ಯಪಡಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಧೀನ ನ್ಯಾಯಾಲಯವು ಸಂದಾಯ ಮಾಡಿರುವ ಸ್ಟ್ಯಾಂಪು ಶುಲ್ಕ ಸರಿಯಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ.

ಅರ್ಜಿದಾರರು, ಕೊರತೆಯಿರುವ ಸ್ಟಾಂಪು ಶುಲ್ಕವನ್ನು ಹೇಗೆ ಸಂದಾಯ ಮಾಡಲಾಗಿದೆ ಮತ್ತು ಎಲ್ಲಾ ಅಂಥ ಸಂದಾಯವನ್ನು, ಬಾಕಿ ಸಂದಾಯದಂತೆಯೇ ಮಾನ್ಯಗೊಳಿಸಬೇಕಾಗಿರುತ್ತದೆಯೇ ಎಂಬುದನ್ನು ಕಂಡುಕೊಳ್ಳಲು ಕ್ರಮ ತೆಗೆದುಕೊಳ್ಳಬೇಕೆಂಬುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವನ್ನು ಕೋರಿರುವುದಿಲ್ಲ. ಈ ಹಂತದಲ್ಲಿ ನ್ಯಾಯಾಲಯವು, ಕೊರತೆಯಿರುವ ಸ್ಟಾಂಪು ಶುಲ್ಕದ ಸಂದಾಯಕ್ಕೆ ಸಂಬಂಧಿಸಿದಂತೆ ಅಳವಡಿಸಿಕೊಳ್ಳಬೇಕಾದ ರೀತಿ ಅಥವಾ ವಿಧಾನವನ್ನು ಪ್ರಯತ್ನಿಸಲಾಗುವುದಿಲ್ಲ.

12. ಜಿಲ್ಲಾಧಿಕಾರಿಗಳು, ವಾದಿಯ ವಿರುದ್ಧ ಯಾವುದೇ ಕ್ರಮವನ್ನು ಆರಂಭಿಸಿರುವುದಿಲ್ಲ. ಇವರು ಕೊರತೆ ಸ್ಟಾಂಪು ಶುಲ್ಕದ ಸಂದಾಯದ ಬಗ್ಗೆ ತೃಪ್ತಿಕರ ಧೋರಣೆಯನ್ನು ತಳೆದಿರುತ್ತಾರೆ. ಕಾನೂನಿನಲ್ಲಿ ಗೊತ್ತುಪಡಿಸಿದ ಅವಧಿಯೊಳಗೆ ಮೊಬಲಗನ್ನು ಸಂದಾಯ ಮಾಡಲಾಗದಿದ್ದಲ್ಲಿ ಕೂಡ, ವಾದಿಯ ಇಂಥ ನಡೆಯಿಂದ ಜಿಲ್ಲಾಧಿಕಾರಿಗಳಿಗೆ ಬಾಧಕವಾಗಿರುವುದಿಲ್ಲವೆಂಬುದು ವಾಸ್ತವಾಂಶವಾಗಿದ್ದು, ಇದರಿಂದಾಗಿ, ಕೊರತೆಯಿರುವ ಸ್ಟಾಂಪು ಶುಲ್ಕದ ಸಂದಾಯದಲ್ಲಿ ವಾದಿಗಳ ಕಡೆಯಿಂದ ಯಾವುದಾದರೂ ಕಾರ್ಯವಿಧಾನವು ನಿರಸನವಾಗಿದ್ದಲ್ಲಿ, ಎದುರು ಪಕ್ಷಕಾರನ ಸಂದರ್ಭದಲ್ಲಿ, ಸಾಕ್ಷ್ಯದಲ್ಲಿನ ಅಂಥ ದಸ್ತಾವೇಜನ್ನು ಒಪ್ಪಿಕೊಳ್ಳುವ ಉದ್ದೇಶಕ್ಕೆ ಸಂಬಂಧಿಸಿದಂತೆ ವಿಚಾರಣೆಯ ವಸ್ತು ವಿಷಯವಾಗುವುದಿಲ್ಲ. ಅಧೀನ ನ್ಯಾಯಾಲಯವು, ದಸ್ತಾವೇಜಿನ ಮೇಲೆ ಸಂದಾಯ ಮಾಡಬಹುದಾಗಿದ್ದ ಸ್ಟಾಂಪು ಶುಲ್ಕಕ್ಕೆ ಸಂಬಂಧಿಸಿದ ವಿಷಯವನ್ನು ಸ್ವತಃ ಮನವರಿಕೆ ಮಾಡಿಕೊಂಡು, ವಾಸ್ತವವಾಗಿ, ಯುಕ್ತವಾಗಿ ಸಂದಾಯ ಮಾಡಲಾಗಿರುವ ಸ್ಟಾಂಪು ಶುಲ್ಕದ ದಸ್ತಾವೇಜನ್ನು ಹಾಜರುಪಡಿಸಲು ವಾದಿಗಳಿಗೆ ಅವಕಾಶ ನೀಡಿದ್ದು, ಇದನ್ನು ಸಾಕ್ಷ್ಯದಂತೆ ಗುರುತು ಮಾಡಲಾಗಿದೆಯೆಂಬ ತೀರ್ಮಾನಕ್ಕೆ ಬಂದಿರುತ್ತದೆ.

13. ಅರ್ಜಿದಾರರು ಉದಾಹರಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯವಾಗುವುದಿಲ್ಲ. ನ್ಯಾಯಾಲಯದ ಗಮನವನ್ನು ಸೆಳೆದಿರುವ ಸದರಿ ತೀರ್ಪಿನ 15ನೇ ಪ್ಯಾರಾಕ್ಕೆ ಸಂಬಂಧಪಡುವ

ಮಟ್ಟಿಗೆ, ಸರ್ವೋಚ್ಚ ನ್ಯಾಯಾಲಯವು, ಒಂದು ಲಿಖಿತ ಪತ್ರವನ್ನು ಯಾವ ರಾಜ್ಯದಲ್ಲಿ ನಿರ್ವಹಿಸಲಾಗಿತ್ತೊ, ಆ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಕಾನೂನಿನ ನಿಬಂಧನೆಗಳಿಗನಿಸಾರವಾಗಿ, ಲಿಖಿತದ ಮೇಲಿನ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡುವ ಬದ್ಧತೆಯೊಂದಿಗೆ ವ್ಯವಹರಿಸುತ್ತದೆ.

14. ಜೊತೆಗೆ, 05.01.2013ಕ್ಕಿಂತ ಹಿಂದೆಯೇ ಸಾಕ್ಷ್ಯಕ್ಕಾಗಿ ದಸ್ತಾವೇಜನ್ನು ಒಪ್ಪಿಕೊಳ್ಳಲಾಗಿತ್ತೆಂದೂ ಹಾಗೂ, ಪ್ರಸ್ತುತ ರಿಟ್ ಅರ್ಜಿಯನ್ನು 24.08.2015ರಂದು ಅಂದರೆ ಸುಮಾರು $2^{1}/_{2}$ ವರ್ಷಗಳ ನಂತರ ಸಲ್ಲಿಸಲಾಗಿತ್ತೆಂದು ಇಲ್ಲಿ ಹೇಳಲೇಬೇಕಾಗಿರುತ್ತದೆ. ಹಾಗಾಗಿ, ಅರ್ಜಿದಾರರು ಸಹ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಲ್ಲಿ ತುಂಬ ವಿಳಂಬದ ದೋಷವನ್ನೇ ಎಸಗಿರುತ್ತಾರೆ.

15. ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.